(ಸದನವು ಸಂಜೆ 5.00 ಗಂಟೆ 54 ನಿಮಿಷಕ್ಕೆ ಮುಕ್ತಾಯಗೊಂಡು ದಿನಾಂಕ 24–06–2014 ರಂದು ಮಂಗಳವಾರ ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು.)

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಸದನದಲ್ಲಿ ಮಂಡಿಸಲಾದ ಉತ್ತರಗಳು

(ಅನುಬಂಧ–1)

ಕಂದಾಯ ಇಲಾಖೆಗೆ ಒದಗಿಸಿದ ಅನುದಾನ

01 (51) **ಶ್ರೀ ಅಪ್ಪಾಜಿ @ ಚನ್ನಬವರಾಜ್ ಶಂಕರರಾವ್ ನಾಡಗೌಡ** (ಮುದ್ದೇಬಿಹಾಳ) :– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :–

(ಅ) ಕಳೆದ ಮೂರು ವರ್ಷಗಳಲ್ಲಿ ಕಂದಾಯ ಇಲಾಖೆಗೆ ಒದಗಿಸಿದ ಅನುದಾನವೆಷ್ಟು (ವರ್ಷವಾರು ವಿವರವನ್ನು ನೀಡುವುದು)

(ಆ) ಕಳೆದ ವರ್ಷದ ವಿವಿಧ ಯೋಜನೆಗೆ ಮಾಡಲಾಗಿರುವ ಅನುದಾನದ ವೆಚ್ಚವೆಷ್ಟು; (ವಿವರ ನೀಡುವುದು)

(ಇ) ಹಾಗಿದ್ದಲ್ಲಿ, ಒದಗಿಸಿದ ಅನುದಾನದಲ್ಲಿ ಯೋಜನೆಗಳು ಪೂರ್ಣವಾಗದೇ ಇರಲು ಕಾರಣಗಳೇನು;

(ಅ) ಈ ಬಗ್ಗೆ ಸರ್ಕಾರದ ಮಾನದಂಡವೇನು? (ವಿವರ ನೀಡುವುದು)

**ಶ್ರೀ ವಿ. ಶ್ರೀನಿವಾಸ್ ಪ್ರಸಾದ್ (ಮಾನ್ಯ ಕಂದಾಯ ಸಚಿವರು)** :–

ಕಳೆದ 3 ವರ್ಷಗಳಲ್ಲಿ ಒದಗಿಸಿದ ಅನುದಾನದ ವಿವರ

ರೂ. ಲಕ್ಷಗಳಲ್ಲಿ

| ಸಾಲು | ಯೋಜನೆ | ಯೋಜನೆತರ |
|---|---|---|
| 2011–12 | 107415.87 | 232972.01 |
| 2012–13 | 89997.00 | 325170.63 |
| 2013–14 | 116915.17 | 309499.41 |
| ಒಟ್ಟು | 314328.04 | 867642.05 |

(ಆ) ಇಲಾಖಾವಾರು ಮಾಹಿತಿ ಅನುಬಂಧ–1 ರಲ್ಲಿ ಲಗತ್ತಿಸಿದೆ.

ಇ) ಆರ್ಥಿಕ ಇಲಾಖೆಯಿಂದ ಒದಗಿಸಲಾದಷ್ಟು ಅನುದಾನವನ್ನು ವಿನಿಯೋಗಿಸಿ ಯೋಜನೆಗಳನ್ನು ಅನುಷ್ಠಾನಗೊಳಿಸಿದೆ.

(ಈ) ಮಂಜೂರಾದ ಕ್ರಿಯಾ ಯೋಜನೆಗಳಂತೆ ಅನುದಾನವನ್ನು ವಿನಿಯೋಗಿಸಲಾಗುತ್ತದೆ.

# ಅನುಬಂಧ-1

2013-14ನೇ ಸಾಲಿನ ಯೋಜನೆ (ರೂ. ಲಕ್ಷಗಳಲ್ಲಿ) ಪ್ರಶ್ನೆ ನಂ: 51

| ಕ್ರ ಸಂ. | ಯೋಜನೆಯ ಹೆಸರು | 2013014ನೇ ಸಾಲಿನಲ್ಲಿ ಒದಗಿಸಲಾದ ಅನುದಾನ | 2013-14 ಸಾಲಿನಲ್ಲಿ ಖರ್ಚಾದ ಅನುದಾನ |
|---|---|---|---|
| 1 | ಭೂಸುಧಾರಣೆಗಳಿಗೆ ವರದಿಗಳನ್ನು ಕ್ರೋಢೀಕರಿಸಲು ಕೋಶದ ಸೃಜನೆ 2506-00-101-5-01-25 ಅಧುನೀಕರಣ | | |
| | (1) ಮೈಸೂರು ಹಾಗೂ ಗುಲ್ಬರ್ಗಾ ಭೂಮಾಪನ ತರಬೇತಿ ಸಂಸ್ಥೆಗಳನ್ನು ಬಲಪಡಿಸುವುದಕ್ಕೆ | 20.00 | 14.93 |
| | (2) ಕೇಂದ್ರ ಕಛೇರಿಯ ಪಿ.ಎಂ.ಯು. ಘಟಕದ ಹಾಗೂ ಕೇಂದ್ರ ಕಛೇರಿಯ ನಿರ್ವಹಣೆ | 17.06 | 11.96 |
| | (3) ಮೋಜಣಿ 11-ಇ ಸ್ಕೆಚ್ ಹಾಗೂ ಕೊಲ್ಯಾಬ್ ಲ್ಯಾಂಡ್ ಸಾಫ್ಟ್‌ವೇರ್ ಕುರಿತು ಇಲಾಖಾ ಹಾಗೂ ಕಂದಾಯ ಇಲಾಖೆಯ ನೌಕರರಿಗೆ ತರಬೇತಿ ನೀಡುವುದು ಹಾಗೂ ಇಲಾಖೆಯ ಪ್ರಗತಿ ಪರಿಶೀಲನ ಇತರೆ ಸಭೆ ಹಾಗೂ ಕಾರ್ಯಗಾರಗಳನ್ನು ನಡೆಸುವುದು | 4.00 | 1.41 |
| 2 | 2506-00-101-5-10 ಭೂದಾಖಲೆಗಳ ಗಣಕೀಕರಣ (CLR) | 1000.00 | – |
| 3 | 2560-00-01-5-11 ರಾಜ್ಯಸ್ವ ಆಡಳಿತದ ಬಲವರ್ಧನೆ ಹಾಗೂ ಭೂದಾಖಲೆಗಳನ್ನು ತಹಲ್‌ವರಗೆ ಸಿದ್ಧಪಡಿಸುವ ಕೇಂದ್ರ ಪುರಸ್ಕರ ಯೋಜನೆ (SRA & ULR) | 500.00 | – |
| 4 | ರಾಷ್ಟ್ರೀಯ ಭೂದಾಖಲೆಗಳ ನಿರ್ವಹಣಾ ಯೋಜನೆ | 4000.00 | 65.81 |
| 5 | ಭೂಮಿ ಉಸ್ತುವಾರಿ ಕೋಶದ ಬ್ರಾಡ್ ಬ್ಯಾಂಡ್, ಲೀಸ್ಲೈನ್, ಡಾಟಾ ಕಾರ್ಡ್, ಸಿಯುಜಿ, ತರಬೇತಿ ವೆಚ್ಚ, ಸಿಟಿಂಗ್ ಫೀ ಹಾಗೂ ಕಛೇರಿ ವೆಚ್ಚ | 40.00 | 39.90 |
| 6 | ವೃದ್ಧಾಪ್ಯ (ಇಂದಿರಾ ಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ವೇತನ | 70000 | 32576 |
| 7 | ಅಂಗವಿಕರ ವೇತನ | 56809 | 55474 |
| 8 | ಹೊಸ ಸಾಮಾಜಿಕ ಭದ್ರತಾ ಯೋಜನೆ (ಸಂಧ್ಯಾ ಸುರಕ್ಷಾ) | 75666 | 86931 |
| 9 | ನಿರ್ಗತಿಕ ವಿಧವಾ ವೇತನ | 55000 | 63936 |
| 10 | ರಾಷ್ಟ್ರೀಯ ಕುಟುಂಬ ನೆರವು ಯೋಜನೆ | 4500 | 3400 |
| 11 | ಅಂತ್ಯ ಸಂಸ್ಕಾರ ನಿಧಿ ಯೋಜನೆ | 1000 | 518 |
| 12 | ಆಮ್‌ಆದ್ಮಿ ಭೀಮಾ ಯೋಜನೆ | 750 | 522 |
| 13 | ಆದರ್ಶ ವಿವಾಹ ಯೋಜನೆ | 308 | 144 |
| 14 | ಆರಾಧನಾ ಯೋಜನೆ | 1000.55 | 1000.55 |
| | ವಿಶೇಷ ಘಟಕ ಯೋಜನೆ | 1900.05 | 1900.05 |
| | ಗಿರಿಜನ ಉಪಯೋಜನೆ | 400.00 | 400.00 |
| 15 | ಯಡಿಯೂರು ಅಭಿವೃದ್ಧಿ ಮಂಡಳಿ | 34.00 | 34.00 |

| 1 | 2 | 3 | 4 |
|---|---|---|---|
| 16 | ಧಾರ್ಮಿಕ ಸ್ಥಳಗಳಲ್ಲಿ ಮೂಲಭೂತ ಸೌಕರ್ಯ ಮತ್ತು ವಸತಿ ಸೌಕರ್ಯ | 1400.99 | 1400.99 |
| 17 | ಮಾನಸ ಸರೋವರ ಯಾತ್ರಿಕರಿಗೆ ನೆರವು | 500.00 | 500.00 |
| 18 | ಮಿನಿ ವಿಧಾನ ಸೌಧ ಮತ್ತು ಉಪ ನೋಂದಣಾಧಿಕಾರಿಗಳ ಕಛೇರಿ ಕಟ್ಟಡ ನಿರ್ಮಾಣ | 3000.00 | 2446.20 |
| 19 | ಜಿಲ್ಲಾ ಕಛೇರಿಗಳ ಸಂಕೀರ್ಣ ಕಟ್ಟಡ ನಿರ್ಮಾಣ | 3000.00 | 2446.00 |
| 20 | ಬಸವಕಲ್ಯಾಣ ಅಭಿವೃದ್ಧಿ ಮಂಡಳಿ | 500.00 | 228.15 |
| 21 | ಕಾಗಿನೆಲೆ ಅಭಿವೃದ್ಧಿ ಮಂಡಳಿ | 500.00 | 484.50 |
| 22 | ಕಿತ್ತೂರು ಅಭಿವೃದ್ಧಿ ಪ್ರಾಧಿಕಾರ | 80.00 | 60.00 |
| 23 | ಕೂಡಲ ಸಂಗಮ ಅಭಿವೃದ್ಧಿ ಮಂಡಳಿ | 137.49 | 137.49 |

## ಗಂಗಾ ಮತಸ್ಥ ಜನಾಂಗದವರಿಗೆ ಹೆಚ್ಚಿನ ಸೌಲಭ್ಯಗಳನ್ನು ಒದಗಿಸುವುದು

2 (67) **ಶ್ರೀ ಬಾಲಕೃಷ್ಣ ಸಿ.ಎನ್.** (ಶ್ರವಣಬೆಳಗೊಳ):– ಮಾನ್ಯ ಯುವ ಸಬಲೀಕರಣ ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ದಯವಿಟ್ಟು ಈ ಪ್ರಶ್ನೆಗಳಿಗೆ ಉತ್ತರಿಸುವರೇ:–

(ಅ) ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ ಗಂಗಾಮತಸ್ಥ ಜನಾಂಗದವರು ವಾಸವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಈ ತಾಲ್ಲೂಕಿನಲ್ಲಿರುವ ಈ ಜನಾಂಗದವರ ಜನಸಂಖ್ಯೆ ಎಷ್ಟು ; (ಗ್ರಾಮಗಳವಾರು ವಿವರಗಳನ್ನು ನೀಡುವುದು)

(ಇ) ಹಾಗಿದ್ದಲ್ಲಿ, ಈ ಜನಾಂಗದವರ ಜನಸಂಖ್ಯೆಗನುಗುಣವಾಗಿ ಮೂಲಭೂತ ಸೌಲಭ್ಯ ಹಾಗೂ ಸರ್ಕಾರದ ಇತರೆ ಸೌಲಭ್ಯಗಳನ್ನು ಒದಗಿಸಲಾಗಿದೆಯೇ ;

(ಈ) ಹಾಗಿದ್ದಲ್ಲಿ, ಯಾವ ಯಾವ ಸೌಲಭ್ಯಗಳನ್ನು ಒದಗಿಸಲಾಗಿದೆ; (ವಿವರಗಳನ್ನು ನೀಡುವುದು)

(ಉ) ಮೀನುಗಾರಿಕೆ ಇಲಾಖೆಯಿಂದ ಈ ಜನಾಂಗದವರಿಗೆ ಹೆಚ್ಚಿನ ಸಂಖ್ಯೆಯಲ್ಲಿ ವಸತಿ ಸೌಲಭ್ಯಗಳನ್ನು ಕಲ್ಪಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

**ಶ್ರೀ ಕೆ. ಅಭಯ ಚಂದ್ರ (ಮಾನ್ಯ ಯುವ ಸಬಲೀಕರಣ ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು):–**

(ಅ) ಹೌದು.

(ಆ) ಮೀನುಗಾರಿಕೆ ಇಲಾಖೆಯು ಮೀನುಗಾರರ ಜಾತಿವಾರು ಜನಗಣತಿ ಕೈಗೊಂಡಿರುವುದಿಲ್ಲ.

(ಇ) ಗಂಗಾಮತಸ್ಥ ಜನಾಂಗದವರನ್ನೊಳಗೊಂಡಂತೆ ಎಲ್ಲಾ ವೃತ್ತಿಪರ ಮೀನುಗಾರರಿಗೆ ಮೀನುಗಾರಿಕೆ ಇಲಾಖೆಯ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.